# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 918 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 27.12.2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಕಂದಾಯ ಉಪವಿಭಾಗ ಮಟ್ಟದಲ್ಲಿ ಎಷ್ಟು ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ; (ವಿವರ ನೀಡುವುದು) | 2018-19ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ-94ರನ್ವಯ ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪ ವಿಭಾಗಗಳಲ್ಲಿ ತಲಾ ಒಂದರಂತೆ ವಿಸ್ತರಿಸಿ ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ:ಮಮಇ/141/ಪಿಹೆಚ್‌ಪಿ/2018, ಬೆಂಗಳೂರು ದಿನಾಂಕ:15.09.2018ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.. (ಸರ್ಕಾರದ ಆದೇಶವನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ) |
| (ಆ) | ಈ ಪೈಕಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಪ್ರಾರಂಭಿಸಲಾಗಿರುವ ವೃದ್ಧಾಶ್ರಮಗಳ ಸಂಖ್ಯೆ ಎಷ್ಟು; ಎಷ್ಟು ಸಂಘ ಸಂಸ್ಥೆಗಳಿಗೆ ಮಂಜೂರಾತಿದೊರೆತಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಜಿಲ್ಲಾ ಮಟ್ಟದಲ್ಲಿ 26 ವೃದ್ಧಾಶ್ರಮಗಳು ಮತ್ತು ಕಂದಾಯ ಉಪ ವಿಭಾಗಗಳಲ್ಲಿ ಪ್ರಸ್ತುತ 09 ವೃದ್ಧಾಶ್ರಮಗಳು ಕಾರ್ಯನಿರ್ವಹಿಸುತ್ತಿದೆ. ಜಿಲ್ಲೆಗೆ ಒಂದರಂತೆ 26 ಮತ್ತು ಕಂದಾಯ ಉಪ ವಿಭಾಗದಲ್ಲಿ 9 ವೃದ್ಧಾಶ್ರಮಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತ್ತಿದ್ದು, ಆಡಳಿತಾತ್ಮಕ ಮಂಜೂರಾತಿ ನೀಡಿರುವ ಸ್ವಯಂ ಸೇವಾ ಸಂಸ್ಥೆಗಳ ಮಾಹಿತಿಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ |
| (ಇ) | ಕೇಂದ್ರ ಮತ್ತು ರಾಜ್ಯದಲ್ಲಿ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವೆಷ್ಟು; (ವಿವರ ನೀಡುವುದು) | ಕೇಂದ್ರ ಮತ್ತು ರಾಜ್ಯ ಅನುದಾನದಡಿ ಕಾರ್ಯನಿರ್ವಹಿಸುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನದ ವಿವರ ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ ನೋಡಿ) |
| (ಈ) | ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರ ಕಡಿಮೆ ಅನುದಾನ ನೀಡುತ್ತಿರುವುದರಿಂದಲೇ, ವೃದ್ಧಾಶ್ರಮಗಳನ್ನು ಆರಂಭಿಸಲು ಸಂಘ ಸಂಸ್ಥೆಗಳು ಮುಂದೆ ಬರದೇ ಇರುವುದು ನಿಜವೇ; | ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರ ಕಡಿಮೆ ಅನುದಾನ ನೀಡುತ್ತಿದ್ದರೂ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬರುತ್ತಿವೆ.<br><br>ಈಗಾಗಲೇ ರಾಜ್ಯದ 31 ಜಿಲ್ಲೆಗಳ ಪೈಕಿ ಒಟ್ಟು 25 ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ರಾಜ್ಯ ಸರ್ಕಾರದ ಅನುದಾನದಡಿ ಜಿಲ್ಲಾ ಮಟ್ಟದಲ್ಲಿ 26 ವೃದ್ಧಾಶ್ರಮಗಳು ನಡೆಯುತ್ತಿವೆ.<br><br>ರಾಜ್ಯದ 52 ಕಂದಾಯ ಉಪ ವಿಭಾಗಗಳಲ್ಲಿ ಒಟ್ಟು 09 ವೃದ್ಧಾಶ್ರಮಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. |

| ಕೇಂದ್ರ ಅನುದಾನಿತ ವೃದ್ಧಾಶ್ರಮಗಳು | |
|---|---|
| ಫಲಾನುಭವಿಗಳ ಸಂಖ್ಯೆ | ಅಂದಾಜು ವಾರ್ಷಿಕ ಅನುದಾನ (ರೂ.ಲಕ್ಷಗಳಲ್ಲಿ) |
| 25 | 24.00 |
| 50 | 49.00 |
| **ರಾಜ್ಯ ಅನುದಾನಿತ ವೃದ್ಧಾಶ್ರಮಗಳು** | |
| 25 | 12.00 |

<table>
<tr>
<td>(ಉ)</td>
<td>ಹಾಗಿದ್ದಲ್ಲಿ, ಕೇಂದ್ರ ಸರ್ಕಾರದಂತೆ ರಾಜ್ಯದಲ್ಲೂ ವೃದ್ಧಾಶ್ರಮಗಳ ನಿರ್ವಹಣಾ ವೆಚ್ಚದ ವಾರ್ಷಿಕ ಅನುದಾನವನ್ನು ಹೆಚ್ಚಿಸಬಹುದಲ್ಲವೇ;</td>
<td>ಸರ್ಕಾರದ ಆದೇಶ ಸಂಖ್ಯೆ:ಮಮಇ/242/ಪಿಹೆಚ್‌ಪಿ(ಇ)/2021, ದಿನಾಂಕ:26.09.2022ರಲ್ಲಿ ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪ ವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ವಾರ್ಷಿಕವಾಗಿ ಅನುದಾನವನ್ನು ರೂ.8.00 ಗಳಿಂದ ರೂ.12.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.(ಅನುಬಂಧ-3ರಲ್ಲಿ ಒದಗಿಸಲಾಗಿದೆ)</td>
</tr>
<tr>
<td>(ಊ)</td>
<td>ವೃದ್ಧಾಶ್ರಮಗಳನ್ನು ಆರಂಭಿಸಲು ಕೋರಿ ಸಲ್ಲಿಕೆ ಆಗಿರುವ ಎಷ್ಟು ಪ್ರಸ್ತಾವನೆಗಳು ಮಂಜೂರಾತಿಗೆ ಬಾಕಿ ಇವೆ? (ವಿವರ ನೀಡುವುದು)</td>
<td>ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಕೋರಿ ಸ್ವೀಕೃತವಾಗಿರುವ ಪ್ರಸ್ತಾವನೆಗಳ ಮಾಹಿತಿಯು ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ಯೋಜನೆಯ ಹೆಸರು</th><th>ಒಟ್ಟು ವೃದ್ಧಾಶ್ರಮಗಳು</th><th>ಪ್ರಸ್ತುತ ನಡೆಯುತ್ತಿರುವ ವೃದ್ಧಾಶ್ರಮಗಳು</th><th>ಆಡಳಿತಾತ್ಮಕ ಮಂಜೂರಾತಿ ಕೋರಿ ಸ್ವೀಕೃತವಾಗಿರುವ ಪ್ರಸ್ತಾವನೆಗಳು</th><th>ಜಿಲ್ಲಾ ಕಛೇರಿಯಲ್ಲಿ ಬಾಕಿ ಇರುವ ಪ್ರಸ್ತಾವನೆಗಳು</th></tr>
<tr><td>1</td><td>ಜಿಲ್ಲೆಗೆ ಒಂದರಂತೆ ಇರುವ ವೃದ್ಧಾ ಶ್ರಮಗಳು</td><td>30 ಜಿಲ್ಲೆಗಳಲ್ಲಿ 31 ವೃದ್ಧಾ ಶ್ರಮಗಳು (ಬೆಂಗಳೂರು ನಗರ ಜಿಲ್ಲೆಯಲ್ಲಿ 2 ವೃದ್ಧಾಶ್ರಮ ಗಳು)</td><td>26</td><td>3</td><td>2</td></tr>
<tr><td>2</td><td>ಕಂದಾಯ ಉಪ ವಿಭಾಗಕ್ಕೆ ಒಂದರಂತೆ ಇರುವ ವೃದ್ಧಾಶ್ರಮ ಗಳು</td><td>52</td><td>9</td><td>26</td><td>17</td></tr>
</table>
ವಿವರವನ್ನು ಅನುಬಂಧ-4ರಲ್ಲಿ ಒದಗಿಸಲಾಗಿದೆ.</td>
</tr>
</table>

ಸಂಖ್ಯೆ:ಮಮಇ 275 ಪಿಹೆಚ್‌ಪಿ 2022

Halappa BA

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಹಾಗೂ ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಅನುಬಂಧ -1

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪವಿಭಾಗಗಳಲ್ಲಿ ತಲಾ ಒಂದರಂತೆ ವಿಸ್ತರಿಸಿ ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯದ ಏಕಕಡತ ಸಂಖ್ಯೆ:ವಿಹಿನಾಸನಿ/ಹಿ.7/ವೃದ್ಧಾಶ್ರಮ/ಯೋ.ಶಾ/41/2018-19

ಪ್ರಸ್ತಾವನೆ:

2018-19ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ-94ರಂತೆ ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪವಿಭಾಗಗಳಲ್ಲಿ ತಲಾ ಒಂದರಂತೆ ವಿಸ್ತರಿಸಿ ಪ್ರಾರಂಭಿಸುವ ಬಗ್ಗೆ ಘೋಷಿಸಲಾಗಿದೆ.

2011ರ ಜನಗಣತಿಯಂತೆ ಕರ್ನಾಟಕ ರಾಜ್ಯದ ಜನಸಂಖ್ಯೆ 6.10 ಕೋಟಿಯಿದ್ದು, ಇದರಲ್ಲಿ 57.91 ಲಕ್ಷ ಹಿರಿಯ ನಾಗರಿಕರು ಇರುತ್ತಾರೆ. ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ-2007ರ ಅಧ್ಯಾಯ-3ರ ಕಲಂ19(1)ರನ್ವಯ ಪ್ರತಿ ಜಿಲ್ಲೆಯಲ್ಲಿ 150 ನಿರ್ಗತಿಕ ವೃದ್ಧರಿಗೆ ವೃದ್ಧಾಶ್ರಮಗಳನ್ನು ರಾಜ್ಯ ಸರ್ಕಾರಗಳು ಪ್ರಾರಂಭಿಸುವಂತೆ ತಿಳಿಸಲಾಗಿರುವುದರಿಂದ ಪ್ರತಿ ಜಿಲ್ಲೆಯಲ್ಲಿ 25 ನಿರ್ಗತಿಕ ವೃದ್ಧರಿಗಾಗಿ ರಾಜ್ಯ ಅನುದಾನ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ನಡೆಸುತ್ತಿದ್ದು, ಈ ಬಗೆಯ ವೃದ್ಧಾಶ್ರಮಗಳನ್ನು ರಾಜ್ಯದ ಎಲ್ಲಾ ಕಂದಾಯ ಉಪವಿಭಾಗಗಳ ಕೇಂದ್ರ ಸ್ಥಾನಗಳಲ್ಲಿ ತಲಾ ಒಂದರಂತೆ ಪ್ರಾರಂಭಿಸುವ ಅವಶ್ಯಕತೆ ಇರುತ್ತದೆ. ಈ ವೃದ್ಧಾಶ್ರಮಗಳಲ್ಲಿ ಬಡತನ ರೇಖೆಗಿಂತ ಕೆಳಗಿನ ವಯೋವೃದ್ಧರಿಗೆ ಉಚಿತ ವಸತಿ, ಊಟ, ಔಷಧೋಪಚಾರ, ಮನರಂಜನೆಗಳನ್ನು ಒದಗಿಸಲಾಗುವುದು. ಅದರಂತೆ, 2018-19ನೇ ಸಾಲಿನಲ್ಲಿ 52 ಉಪವಿಭಾಗಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಆರಂಭಿಸಲಾಗುವ ಪ್ರತಿ ವೃದ್ಧಾಶ್ರಮಗಳ ನಿರ್ವಹಣೆಗಾಗಿ ಆವರ್ತಕ ವೆಚ್ಚ ರೂ.8.00 ಲಕ್ಷಗಳು ಮತ್ತು ಅನಾವರ್ತಕ ವೆಚ್ಚ ರೂ.2.00 ಲಕ್ಷಗಳು (ಪ್ರಾರಂಭದಲ್ಲಿ ಒಂದು ಬಾರಿ ಮಾತ್ರ) ಹೀಗೆ ಒಟ್ಟು ರೂ.10.00 ಲಕ್ಷಗಳ ಅನುದಾನದಂತೆ ಒಟ್ಟು ರೂ.5.20 ಕೋಟಿಗಳ ಅವಶ್ಯಕತೆಯಿದ್ದು ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ:2235-00-101-0-30 ಯೋಜನೆ, ಉದ್ದೇಶಿತ ಲೆಕ್ಕಶೀರ್ಷಿಕೆ:103 ಸಹಾಯಾನುದಾನದಡಿ ಒದಗಿಸಲು ಮೇಲೆ ಓದಲಾದ ಏಕಕಡತದಲ್ಲಿ ನಿರ್ದೇಶಕರು, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 141 ಪಿಹೆಚ್‌ಪಿ 2018, ಬೆಂಗಳೂರು, ದಿನಾಂಕ:15.09.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ-94ರನ್ವಯ ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪವಿಭಾಗಗಳಲ್ಲಿ ತಲಾ ಒಂದರಂತೆ ವಿಸ್ತರಿಸಿ ಪ್ರಾರಂಭಿಸುವ ಯೋಜನೆಗೆ ಅವಶ್ಯವಿರುವ ರೂ.5.20 (ಐದುಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು) ಕೋಟಿಗಳ ವೆಚ್ಚವನ್ನು 2018-19ನೇ ಸಾಲಿನ ಲೆಕ್ಕಶೀರ್ಷಿಕೆ:2235-00-101-0-30ರಡಿ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳುವ ಹಾಗೂ ಮಾರ್ಗಸೂಚಿಯನ್ವಯ ನಿಯಮಾನುಸಾರ ಮತ್ತು ಪಾರದರ್ಶಕತೆಯನ್ವಯ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಕ್ರಮವಾಗಿ ಆರ್ಥಿಕ ಇಲಾಖೆ ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 428 ವೆಚ್ಚ-10/2018, ದಿ:28.07.2018 ಮತ್ತು ಪಿಡಿ 70 ಪಿಎಂಎಂ 2018, ದಿ:28.07.2018ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆರ್. ಕಲ್ಪನಾ)
ಸರ್ಕಾರದ ಉಪ ಕಾರ್ಯದರ್ಶಿ,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು(ಜಿ& ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು(ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು(ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001
4. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
5. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ, ಅಭಯ ಸಂಕೀರ್ಣ, 2ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ವೆಚ್ಚ(10), ವಿಧಾನ ಸೌಧ, ಬೆಂಗಳೂರು
8. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ ಒಬಿಜಿಸಿ/ ಹೆಚ್ಚುವರಿ ಪ್ರತಿಗಳು.

ಅನುಬಂಧ-2

## ಜಿಲ್ಲೆಗೊಂದರಂತೆ ಜಿಲ್ಲೆಗಳಲ್ಲಿರುವ ರಾಜ್ಯ ಅನುದಾನಿತ ವೃದ್ಧಾಶ್ರಮಗಳ ಪಟ್ಟಿ

| ಕ್ರ.ಸಂ. | ಜಿಲ್ಲೆಯ ಹೆಸರು | ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ) |
|---|---|---|
| 1 | ಬೆಂಗಳೂರು ನಗರ | ತುಂಗಭದ್ರ ವಿದ್ಯಾ ಸಂಸ್ಥೆ (ರಿ), ಬೆಂಗಳೂರು-17 |
| 2 | ಬೆಂಗಳೂರು ನಗರ | ಚೆಶೈರ್ ಹೋಮ್‌ಇಂಡಿಯಾ (ರಿ), ಬೆಂಗಳೂರು-17 |
| 3 | ಬಳ್ಳಾರಿ | ಎಡಯೂರು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠ, ಬಳ್ಳಾರಿ |
| 4 | ಬೆಳಗಾವಿ | ಡಾ॥ ಬಿ.ಆರ್ ಅಂಬೇಡ್ಕರ್ ಹರಿಜನ ಸೊಸೈಟಿ, ಮುಚ್ಚಂಡಿ-590010, ಬೆಳಗಾಂ |
| 5 | ಬೀದರ್ | ರಮಬಾಯಿ ಅಂಬೇಡ್ಕರ್ ಮಹಿಳಾ ಮಂಡಳ ಜೌರಾದ್ .ಬಿ, ಬೀದರ್ |
| 6 | ಬಾಗಲಕೋಟೆ | ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ಬಾಗಲಕೋಟೆ |
| 7 | ವಿಜಯಪುರ | ಶ್ರೀ ಸಿದ್ಧೇಶ್ವರ ವಿದ್ಯಾಪೀಠ, (ರಿ) ತಾಳಿಕೋಟೆ, ಬಿಜಾಪುರ |
| 8 | ಚಿಕ್ಕಬಳ್ಳಾಪುರ | ಚೈತನ್ಯ ವೃದ್ಧಾಶ್ರಮ, ಚಿಕ್ಕಬಳ್ಳಾಪುರ |
| 9 | ಚಿಕ್ಕಮಗಳೂರು | ರೋಟರಿ ಅಂಡ್ ಇನ್ನರ್ ವ್ಹೀಲ್‌ಟ್ರಸ್ಟ್, ಚಿಕ್ಕಮಗಳೂರು |
| 10 | ಚಿತ್ರದುರ್ಗ | ಶ್ರೀ ಶಕ್ತಿ ಮಹಿಳಾ ಮಂಡಳಿ, ಚಿತ್ರದುರ್ಗ |
| 11 | ಧಾರವಾಡ | ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ, (ರಿ), ಹುಬ್ಬಳ್ಳಿ |
| 12 | ಗದಗ | ಜಿ.ಎಫ್ ಉಪನಾಳ ಪ್ರತಿಷ್ಠಾನ ಬೆಂಗಳೂರು ಶಾಖೆ: ಲಕ್ಷ್ಮೇಶ್ವರ ಶಾಂತಿಧಾಮ ವೃದ್ಧಾಶ್ರಮ, ಲಕ್ಷ್ಮೇಶ್ವರ |
| 13 | ಗುಲ್ಬರ್ಗಾ | ಮಹಾದೇವಿ ತಾಯಿ ಮಹಿಳಾ ವಿದ್ಯಾವರ್ಧಕ ಸಂಘ, ಕಲಬುರಗಿ |
| 14 | ಹಾಸನ | ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನ ಹಳ್ಳಿ, ಹಾಸನ ತಾ॥ |
| 15 | ಹಾವೇರಿ | ಶ್ರೀ ಶಕ್ತಿ ಅಸೋಸಿಯೇಷನ್, ಹಾವೇರಿ. |
| 16 | ಕೋಲಾರ | ದಿವ್ಯಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, (ರಿ), ಶ್ರೀನಿವಾಸಪುರ ತಾ॥ ಕೋಲಾರ |
| 17 | ಕೊಪ್ಪಳ | ವಿದ್ಯಾನಂದ ಗುರುಕುಲ ವೃದ್ಧಾಶ್ರಮ, ಕೊಪ್ಪಳ |
| 18 | ಮಂಡ್ಯ | ಸೇವಾಕಿರಣ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ, ಭಾಷ್ ನಗರ, ಮಂಡ್ಯ |
| 19 | ರಾಮನಗರ | ಶಾಂತಲಾ ಚಾರಿಟಬಲ್ ಟ್ರಸ್ಟ್, |
| 20 | ಶಿವಮೊಗ್ಗ | ಜೀವನಕಿರಣ ವೃದ್ಧಾಶ್ರಮ, ಅಗರದ ಹಳ್ಳಿ, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ |
| 21 | ತುಮಕೂರು | ಶ್ರೀಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್, (ರಿ), ತಿ ತುಮಕೂರು ಜಿಲ್ಲೆ |
| 22 | ಮಡಿಕೇರಿ | ಶ್ರೀ ಶಕ್ತಿ ಅಸೋಸಿಯೇಷನ್ (ರಿ), ಕೊಡಗು |
| 23 | ಯಾದಗಿರಿ | ಅಕ್ಷತಾ ಮಹಿಳಾ ಮಂಡಳಿ, ಯಾದಗಿರಿ |
| 24 | ಚಾಮರಾಜನಗರ | ಜ್ಞಾನ ಸಿಂಧು ವೃದ್ಧಾಶ್ರಮ, ಚಾಮರಾಜನಗರ |
| 25 | ದಕ್ಷಿಣಕನ್ನಡ | ಅಭಯ ಆಶ್ರಯ, (ರಿ) ಅಸೈಗೋಳಿ, ಕೊಣಾಜೆ, ಮಂಗಳೂರು |
| 26 | ಮೈಸೂರು | ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ, ಮೈಸೂರು-570004 |

6

# ರಾಜ್ಯದಲ್ಲಿ ಕಂದಾಯ ಉಪ ವಿಭಾಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯಾಗಿರುವ ವೃದ್ಧಾಶ್ರಮಗಳ ಮಾಹಿತಿ

| ಕ್ರ.ಸಂ. | ಉಪ ವಿಭಾಗದ ಹೆಸರು | ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ) | ಯಾವ ಸಾಲಿನಲ್ಲಿ |
|---|---|---|---|
| 01 | ಮೈಸೂರು | ಮೈಸೂರು ಜಿಲ್ಲೆಯ ಮೈಸೂರು ಕಂದಾಯ ಉಪ ವಿಭಾಗದಲ್ಲಿ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್, ಯಾಚೇನಹಳ್ಳಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್ ವೃದ್ಧಾಶ್ರಮ ದೂರವಾಣಿ ಸಂ:9606140914,8105353599 | 2019-20 |
| 02 | ಹುಣಸೂರು | ಮೈಸೂರು ಜಿಲ್ಲೆಯ ಹುಣಸೂರು ಕಂದಾಯ ಉಪ ವಿಭಾಗದಲ್ಲಿ ಮಾತೃ ಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ (ರಿ), ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಮಾತೃ ಶ್ರೀ ವಿದ್ಯಾ ಶಿಕ್ಷಣ ಸಂಸ್ಥೆ (ರಿ) ವೃದ್ಧಾಶ್ರಮದೂರವಾಣಿ ಸಂಖ್ಯೆ:08223-264690 | 2019-20 |
| 03 | ಬೀದರ್ | ಬೀದರ್ ಜಿಲ್ಲೆಯ ಬೀದರ್ ಕಂದಾಯ ಉಪ ವಿಭಾಗದಲ್ಲಿ ಅಕ್ಕಮಹಾದೇವಿ ಯುವತಿ ಮಂಡಳಿ ಗಾದಗಿ (ರಿ), ಬೀದರ್ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಅಕ್ಕಮಹಾದೇವಿ ಯುವತಿ ಮಂಡಳಿ ಗಾದಗಿ (ರಿ), ವೃದ್ಧಾಶ್ರಮ ದೂರವಾಣಿ ಸಂ:9343605111 | 2019-20 |
| 04 | ಹಾಸನ | ಹಾಸನ ಜಿಲ್ಲೆಯ ಹಾಸನ ಕಂದಾಯ ಉಪ ವಿಭಾಗದಲ್ಲಿ ಶ್ವೇತ ವಿದ್ಯಾ ಸಂಸ್ಥೆ (ರಿ), ದಾಸರಕೊಪ್ಪಲು, ಹಾಸನ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ವೇತ ವಿದ್ಯಾ ಸಂಸ್ಥೆ (ರಿ) ವೃದ್ಧಾಶ್ರಮ ದೂರವಾಣಿ ಸಂ:08172-245287, 9448330386 | 2019-20 |
| 05 | ಸಕಲೇಶಪುರ | ಹಾಸನ ಜಿಲ್ಲೆಯ ಸಕಲೇಶಪುರ ಕಂದಾಯ ಉಪ ವಿಭಾಗದಲ್ಲಿ ಮಧುಶ್ರೀ ಮಹಿಳಾ ಸಮಾಜ (ರಿ), ಅರಕಲಗೂಡು, ಹಾಸನ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಮಧುಶ್ರೀ ಮಹಿಳಾ ಸಮಾಜ (ರಿ) ವೃದ್ಧಾಶ್ರಮ ದೂರವಾಣಿ ಸಂ:08157220511, 9449707511 | 2019-20 |
| 06 | ಸಾಗರ | ಶಿವಮೊಗ್ಗ ಜಿಲ್ಲೆಯ ಸಾಗರ ಕಂದಾಯ ಉಪ ವಿಭಾಗದಲ್ಲಿ ನಂದಾದೀಪ ಅಂಗವಿಕಲ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ (ರಿ), ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ನಂದಾದೀಪ ಅಂಗವಿಕಲ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ (ರಿ) ವೃದ್ಧಾಶ್ರಮ ದೂರವಾಣಿ ಸಂ:08027931195, 2393299 | 2019-20 |
| 07 | ಶಿವಮೊಗ್ಗ | ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಕಂದಾಯ ಉಪ ವಿಭಾಗದಲ್ಲಿ ಸಿದ್ದೇಶ್ವರ ರೂರಲ್‌ಡೆವಲಪ್‌ಮೆಂಟ್ ಸೊಸೈಟಿ (ರಿ), ಹಿರಿಯೂರು ಚಿತ್ರದುರ್ಗ ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಸಿದ್ದೇಶ್ವರ ರೂರಲ್‌ಡೆವಲಪ್‌ಮೆಂಟ್ ಸೊಸೈಟಿ (ರಿ) ವೃದ್ಧಾಶ್ರಮ ದೂರವಾಣಿ ಸಂ:08193271524 | 2019-20 |
| 08 | ತುಮಕೂರು | ತುಮಕೂರು ಜಿಲ್ಲೆಯ ತುಮಕೂರು ಕಂದಾಯ ಉಪ ವಿಭಾಗದಲ್ಲಿ ಶ್ರೀ ಶಾರದಾಂಬ ಟ್ರಸ್ಟ್ (ರಿ), ತುಮಕೂರು ಜಿಲ್ಲೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀ ಶಾರದಾಂಬ ಟ್ರಸ್ಟ್ (ರಿ), ವೃದ್ಧಾಶ್ರಮ ದೂರವಾಣಿ ಸಂ:08162290006 | 2020-21 |
| 09 | ಗದಗ | ಗದಗ ಜಿಲ್ಲೆಯ ಗದಗ ಕಂದಾಯ ಉಪ ವಿಭಾಗದಲ್ಲಿ ಶ್ರೀ ಜೀವನಜ್ಯೋತಿ ಸೇವಾ ಸಂಸ್ಥೆ (ರಿ), ಶಿವರತ್ನ ಕಾಂಪ್ಲೆಕ್ಸ್ ನರಸಾಪೂರ ಶಾಖೆ ಬೆಟಗೇರಿ ಸಂಸ್ಥೆ ಇವರ ವತಿಯಿಂದ ಹೊಸದಾಗಿ ಪ್ರಾರಂಭಿಸಿರುವ ಶ್ರೀಜೀವನಜ್ಯೋತಿ ವೃದ್ಧಾಶ್ರಮ ದೂರವಾಣಿ ಸಂ:9448133320, 9902424263 | 2020-21 |

ಅನುಬಂಧ - 3

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00ಲಕ್ಷಗಳಿಂದ ರೂ.12.00ಲಕ್ಷಗಳಿಗೆ ಹೆಚ್ಚಿಸುವ ಕುರಿತು.

**ಓದಲಾಗಿದೆ:** ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹಿನಿ/ಆ.ವೃ.ಯೋ/ಸಿ14/96/2021-22/1220, ದಿನಾಂಕ: 07.10.2021.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ ಇವರು ಇತ್ತೀಚಿನ ದಿನಗಳಲ್ಲಿ ಆಹಾರ ಪದಾರ್ಥಗಳು, ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದು, ಜೀವನ ನಿರ್ವಹಣಾ ವೆಚ್ಚಗಳು ದುಬಾರಿಯಾಗಿದ್ದು, ಪ್ರಸ್ತುತ ವೃದ್ಧಾಶ್ರಮಗಳ ನಿರ್ವಹಣೆಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನ ರೂ.8.00 ಲಕ್ಷಗಳಲ್ಲಿ ವೃದ್ಧಾಶ್ರಮವನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಿದ್ದು, ಅಲ್ಲದೆ ಕೇಂದ್ರ ಸರ್ಕಾರವು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ 25 ವೃದ್ಧರ ವೃದ್ಧಾಶ್ರಮ ಒಂದಕ್ಕೆ ರೂ.21.00 ಲಕ್ಷಗಳ ವಾರ್ಷಿಕ ಅನುದಾನ ನೀಡುತ್ತಿದ್ದು, ಅದರಂತೆಯೇ ರಾಜ್ಯ ಸರ್ಕಾರದ ವತಿಯಿಂದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ನೀಡುವಂತೆ ಮನವಿ ಸಲ್ಲಿಸುತ್ತಿದ್ದು, ರಾಜ್ಯದ 52 ಕಂದಾಯ ಉಪವಿಭಾಗಗಳಲ್ಲಿ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದ್ದಾಗ್ಯೂ ಕೇವಲ 9 ಸ್ವಯಂ ಸೇವಾ ಸಂಸ್ಥೆಗಳಿಗೆ ಮಾತ್ರ ಮಂಜೂರಾತಿ ದೊರೆತು ಪ್ರಾರಂಭಿಸಲಾಗಿದ್ದು, ಕಡಿಮೆ ಅನುದಾನ ನಿಗದಿಯಾಗಿರುವುದರಿಂದ ಯಾವೊಂದು ಸಂಸ್ಥೆಯು ವೃದ್ಧಾಶ್ರಮವನ್ನು ಪ್ರಾರಂಭಿಸಲು ಮುಂದೆ ಬರುತ್ತಿಲ್ಲವಾದ್ದ ಕಾರಣ ಪ್ರಸ್ತುತ ವೃದ್ಧಾಶ್ರಮಕ್ಕೆ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ಕನಿಷ್ಠ ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವಂತೆ ಮಾನ್ಯ ಮುಖ್ಯಮಂತ್ರಿಯವರನ್ನು ಕೋರಲಾಗಿದ್ದು, ದಿನಾಂಕ: 01.10.2021ರಂದು ಬೆಂಗಳೂರಿನಲ್ಲಿ ನಡೆದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ವಲಯದಡಿ ಜಿಲ್ಲಾ ಪಂಚಾಯತ್ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವುದಾಗಿ ಘೋಷಣೆ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ವಲಯದಡಿ (ಜಿಲ್ಲಾ ಪಂಚಾಯತ್ ಮೂಲಕ) ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳ ನಿರ್ವಹಣೆಗೆ ಪ್ರಸ್ತುತ ನೀಡಲಾಗುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00 ಲಕ್ಷಗಳಿಂದ ರೂ.15.00 ಲಕ್ಷಗಳಿಗೆ ಹೆಚ್ಚಿಸುವ ಅಗತ್ಯತೆಯಿದ್ದು, ವೃದ್ಧಾಶ್ರಮ ನಿರ್ವಹಣೆಗೆ ಬೇಕಾಗುವ ವಾರ್ಷಿಕ ಆಯವ್ಯಯದ ತಃಖ್ತೆ, ತಡೆಪಟ್ಟಿ ಹಾಗೂ ಯೋಜನೆಯ ಅನುಷ್ಠಾನಕ್ಕೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಸಲ್ಲಿಸುತ್ತ, ಈ ಪತ್ರದೊಂದಿಗೆ ಲಗತ್ತಿಸುತ್ತಾ, ಆಡಳಿತಾತ್ಮಕ ಮಂಜೂರಾತಿ ಮತ್ತು ಯೋಜನೆಯ ಅನುಷ್ಠಾನಕ್ಕೆ ತಗಲುವ ಹೆಚ್ಚುವರಿ ಆಯವ್ಯಯ ರೂ.221.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ 2235-00-10-0-30, (ಲೆಕ್ಕಶೀರ್ಷಿಕೆ 2235-02-196-1-03 ಜಿಲ್ಲಾ ಪಂಚಾಯತ್ ವಲಯದಡಿ lump sum) ರಡಿ 2021-22ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಒದಗಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 242 ಪಿಹೆಚ್‌ಪಿ(ಇ) 2021, ದಿನಾಂಕ:26.09.2022**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮವೊಂದಕ್ಕೆ ಭರಿಸಬಹುದಾದ ಆವರ್ತಕ ವೆಚ್ಚಗಳು ಮತ್ತು

ಇತರ ವೆಚ್ಚಗಳಿಗೆ ಅನುಬಂಧದಲ್ಲಿ ವಿವರಿಸಿರುವಂತ ರೂ.8.00 ಲಕ್ಷಗಳಿಂದ ರೂ.12.00 ಲಕ್ಷಗಳಿಗೆ (ರೂಪಾಯಿ ಹನ್ನೆರಡು ಲಕ್ಷಗಳು ಮಾತ್ರ) ಹೆಚ್ಚಿಸಿದೆ.

ಈ ಹಿಂದೆ ಹೊರಡಿಸಲಾಗಿರುವ ಮಾರ್ಗಸೂಚಿಗಳನ್ವಯ ಹಾಗೂ ಸರ್ಕಾರ / ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಆದೇಶ / ಸುತ್ತೋಲೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಷರತ್ತಿಗೊಳಪಟ್ಟು, ಹಾಗೂ ಈ ವೆಚ್ಚವನ್ನು 2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 2235-00-10-0-30, (ಲೆಕ್ಕಶೀರ್ಷಿಕೆ 2235-02-196-1-03 ಜಿಲ್ಲಾ ಪಂಚಾಯತ್ ವಲಯದಡಿ lump sum) ರಡಿ ಭರಿಸಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು, ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ :ಆಇ 380 ವೆಚ್ಚ-10/2021, ದಿನಾಂಕ: 14.09.2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಿ.ಹೆಚ್. ಸರೋಜಮ್ಮ) 26/09/2022
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 1.
4. ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ವಿ.ವಿ.ಗೋಪುರ, ಪೋಡಿಯಂ ಬ್ಲಾಕ್, ಡಾ|| ಅಂಬೇಡ್ಕರ್ ವೀದಿ, ಬೆಂಗಳೂರು-01.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-10) ವಿಧಾನಸೌಧ, ಬೆಂಗಳೂರು.
8. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
11. ಶಾಖಾಧಿಕಾರಿ, ಸ್ವೀಕೃತಿ ಮತ್ತು ರವಾನೆ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬಹುಮಹಡಿಗಳ ಕಟ್ಟಡ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

# ಅನುಬಂಧ-1

ಜಿಲ್ಲಾ ವಲಯದಡಿ ಜಿಲ್ಲಾ ಮಟ್ಟದಲ್ಲಿ ಮತ್ತು ಕಂದಾಯ ಉಪವಿಭಾಗ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿರುವ ವೃದ್ಧಾಶ್ರಮಗಳಿಗೆ ಪ್ರಸ್ತುತ ನೀಡುತ್ತಿರುವ ವಾರ್ಷಿಕ ಅನುದಾನವನ್ನು ರೂ.8.00ಲಕ್ಷಗಳಿಂದ ರೂ.12.00ಲಕ್ಷಗಳಿಗೆ ಹೆಚ್ಚಿಸಲು ಬೇಕಾಗುವ ಅಂದಾಜು ಆಯವ್ಯಯ

| | ಪ್ರಸ್ತುತ ನೀಡುತ್ತಿರುವ ಅನುದಾನದ ಮೊತ್ತ | | | | ಜಿಲ್ಲಾ ವಲಯದಡಿ ಜಿಲ್ಲಾ ಪಂಚಾಯತ್ ಮೂಲಕ ವೃದ್ಧಾಶ್ರಮದ ನಿರ್ವಹಣೆಗೆ ರೂ.12.00 ಲಕ್ಷಗಳಿಗೆ ಸರಿದೂಗಿಸಿದ ಅನುದಾನ | | ಷರಾ |
|---|---|---|---|---|---|---|---|
| **I ಆವರ್ತಕ ವೆಚ್ಚಗಳು** | | | | | | | |
| **ಅ. ಸಿಬ್ಬಂದಿಗಳ ಗೌರವಧನ** | | | | | | | |
| | ವಿವರ | ಸಿಬ್ಬಂದಿ ಸಂಖ್ಯೆ | ಮಾಸಿಕ ನೀಡುವ ಮೊತ್ತ | ಒಟ್ಟು ಮೊತ್ತ | ಮಾಸಿಕ ನೀಡುವ ಮೊತ್ತ | ಮೊತ್ತ | |
| 1 | ಅಧೀಕ್ಷಕರು/ವಾರ್ಡನ್ | 1 | 9000•1•12 | 108000 | 12000•1•12 | 144000 | |
| 2 | ಸಮಾಜ ಸೇವಕರು | 1 | 8500•1•12 | 102000 | 10000•1•12 | 120000 | |
| 3 | ದಾದಿ/ಮಿಡ್ ವೈಫ್ | 1 | 6500•1•12 | 78000 | 8000•1•12 | 96000 | |
| 4 | ಅಡುಗೆಯವರು | 1 | 5000•1•12 | 60000 | 6000•1•12 | 72000 | |
| 5 | ಸಹಾಯಕರು | 1 | 4000•1•12 | 48000 | 5000•1•12 | 60000 | |
| 6 | ಕಾವಲುಗಾರರು | 1 | 4000•1•12 | 48000 | 5000•1•12 | 60000 | |
| 7 | ಅರೆಕಾಲಿಕ ವೈದ್ಯರು | 1 | 500•4•12 | 24000 | 750•4•12 | 36000 | |
| | ಒಟ್ಟು ಗೌರವಧನ | | | **468000** | | **588000** | |
| **ಆ. ಕಟ್ಟಡ ಬಾಡಿಗೆ / ನಿರ್ವಹಣೆ** | | | | | | | |
| 1 | ಕಟ್ಟಡದ ಬಾಡಿಗೆ | – | 5000•12 | 60000 | 10000•1•12 | 120000 | |
| | ಒಟ್ಟು | | | **60000** | | **120000** | |
| **ಇ ಇತರೆ ವೆಚ್ಚಗಳು** | | | | | | | |
| 1 | ಊಟದ ವೆಚ್ಚ | – | 25•35•365 | 320000 | 25•50•365 | 456250 | ರೂ.4,56,250/- ಗಳನ್ನು ರೂ.4,56,000/- ಗಳಿಗೆ ಪೂರ್ಣಾಂಕ ಗೊಳಿಸಿದೆ |
| 2 | ಔಷಧಿ ವೆಚ್ಚ | – | 25•40•12 | 12000 | 25•60•12 | 18000 | ರೂ. 5,25,250/- ಗಳನ್ನು ರೂ.5,25,000/- ಗಳಿಗೆ ಪೂರ್ಣಾಂಕ ಗೊಳಿಸಿದೆ |
| 3 | ಬಟ್ಟೆ, ಎಣ್ಣೆ, ಸೋಪು ಇತ್ಯಾದಿ | – | 25•40•12 | 12000 | 25•60•12 | 18000 | |
| 4 | ವಿದ್ಯುತ್, ನೀರು ಮತ್ತು ಅನಿವಾರ್ಯ ವೆಚ್ಚಗಳು | – | – | 10000 | 25•60•12 | 18000 | |
| 5 | ಮನೋರಂಜನಾ ವೆಚ್ಚಗಳು | – | – | 7000 | 25•50•12 | 15000 | |
| | ಒಟ್ಟು | | | **361000** | | **525250** | |
| **II ಅನಾವರ್ತಕ ವೆಚ್ಚಗಳು** | | | | | | | |
| 1 | ಮಂಚಗಳು | | – | – | 1000•25 | 25000 | |
| 2 | ಹಾಸಿಗೆ ಮತ್ತು ಹೊದಿಕೆಗಳು | | – | – | 1000•25 | 25000 | |
| 3 | ಪಾತ್ರೆಗಳು | | – | – | 12000•1 | 12000 | |
| 4 | ಶೀತೋಪಕರಣಗಳು ಮತ್ತು ಇತರೆ ಸಾಮಗ್ರಿಗಳು | | – | – | 25000•1 | 25000 | |
| 5 | ನ್ಯೂಕ್ಲಿಯಸ್ ಫಂಡ್ | | – | – | 13500•1 | 13500 | |
| | ಒಟ್ಟು | | | | | **100500** | |
| | ಒಟ್ಟು (I + II) ರೂ. | | | **889000** | | **1333750** | |
| | ಸಂಸ್ಥೆಯ ವತಿಯಿಂದ ಭರಿಸಬೇಕಾದ ಶೇ.10ರಷ್ಟು ಅನುದಾನ | | | **88900** | | (–)133375 | |
| | ಪ್ರಥಮ ವರ್ಷ ನೀಡುವ ನಿವ್ವಳ ಅನುದಾನದ ಮೊತ್ತ | | | **800100** | | **1200375** | ರೂ.12,00,375/- ಗಳನ್ನು ರೂ.12,00,000/- ಗಳಿಗೆ ಪೂರ್ಣಾಂಕ ಗೊಳಿಸಿದೆ |
| | ರೂ. 800100/-ಗಳನ್ನು ರೂ.800000/-ಗಳಿಗೆ ಪೂರ್ಣಾಂಕಗೊಳಿಸಿದೆ | | | **800000** | | | |

## ಅನುಬಂಧ-04
## ಜಿಲ್ಲೆಗೊಂದರಂತೆ ಜಿಲ್ಲೆಗಳಲ್ಲಿರುವ ರಾಜ್ಯ ಅನುದಾನಿತ ವೃದ್ಧಾಶ್ರಮಗಳ ಪಟ್ಟಿ

| ಕ್ರ.ಸಂ. | ಜಿಲ್ಲೆಯ ಹೆಸರು | ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ) |
|---|---|---|
| 1 | ಬೆಂಗಳೂರು ನಗರ | ತುಂಗಭದ್ರ ವಿದ್ಯಾ ಸಂಸ್ಥೆ (ರಿ), ಬೆಂಗಳೂರು-17 |
| 2 | ಬೆಂಗಳೂರು ನಗರ | ಚೆಶೈರ್ ಹೋಮ್ ಇಂಡಿಯಾ (ರಿ), ಬೆಂಗಳೂರು-17 |
| 3 | ಬಳ್ಳಾರಿ | ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠ, ಬಳ್ಳಾರಿ |
| 4 | ಬೆಳಗಾವಿ | ಡಾ॥ ಬಿ.ಆರ್ ಅಂಬೇಡ್ಕರ್ ಹರಿಜನ ಸೊಸೈಟಿ, ಮುಚ್ಚಂಡಿ-590010, ಬೆಳಗಾಂ |
| 5 | ಬೀದರ್ | ರಮಬಾಯಿ ಅಂಬೇಡ್ಕರ್ ಮಹಿಳಾ ಮಂಡಳ ಚೌರಾದ್ .ಬಿ, ಬೀದರ್ |
| 6 | ಬಾಗಲಕೋಟೆ | ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ಬಾಗಲಕೋಟೆ |
| 7 | ವಿಜಯಪುರ | ಶ್ರೀ ಸಿದ್ಧೇಶ್ವರ ವಿದ್ಯಾಪೀಠ, (ರಿ) ತಾಳಿಕೋಟೆ, ಬಿಜಾಪುರ |
| 8 | ಚಿಕ್ಕಬಳ್ಳಾಪುರ | ಚೈತನ್ಯ ವೃದ್ಧಾಶ್ರಮ, ಚಿಕ್ಕಬಳ್ಳಾಪುರ |
| 9 | ಚಿಕ್ಕಮಗಳೂರು | ರೋಟರಿ ಅಂಡ್ ಇನ್ನರ್ ವ್ಹೀಲ್‌ಟ್ರಸ್ಟ, ಚಿಕ್ಕಮಗಳೂರು |
| 10 | ಚಿತ್ರದುರ್ಗ | ಶ್ರೀ ಶಕ್ತಿ ಮಹಿಳಾ ಮಂಡಳಿ, ಚಿತ್ರದುರ್ಗ |
| 11 | ಧಾರವಾಡ | ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ, (ರಿ), ಎಹುಬ್ಬಳ್ಳಿ |
| 12 | ಗದಗ | ಜಿ.ಎಫ್ ಉಪನಾಳ ಪ್ರತಿಷ್ಠಾನ ಬೆಂಗಳೂರು ಶಾಖೆ: ಲಕ್ಷ್ಮೇಶ್ವರ ಶಾಂತಿಧಾಮ ವೃದ್ಧಾಶ್ರಮ, ಲಕ್ಷ್ಮೀಶ್ವರ |
| 13 | ಗುಲ್ಬರ್ಗಾ | ಮಹಾದೇವಿ ತಾಯಿ ಮಹಿಳಾ ವಿದ್ಯಾವರ್ಧಕ ಸಂಘ, ಕಲಬುರಗಿ |
| 14 | ಹಾಸನ | ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನ ಹಳ್ಳಿ, ಹಾಸನ ತಾ॥ |
| 15 | ಹಾವೇರಿ | ಶ್ರೀ ಶಕ್ತಿ ಅಸೋಸಿಯೇಷನ್, ಹಾವೇರಿ. |
| 16 | ಕೋಲಾರ | ದಿವ್ಯಜ್ಯೋತಿ ಎಜುಕೇಷನ್ ಅಂಡ್‌ಕಲ್ಚರಲ್ ಸೊಸೈಟಿ, (ರಿ), ಶ್ರೀನಿವಾಸಪುರ ತಾ॥ ಕೋಲಾರ |
| 17 | ಕೊಪ್ಪಳ | ವಿದ್ಯಾನಂದಗುರುಕುಲ ವೃದ್ಧಾಶ್ರಮ, ಕೊಪ್ಪಳ |
| 18 | ಮಂಡ್ಯ | ಸೇವಾಕಿರಣ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ, ಭಾಷ್ ನಗರ, ಮಂಡ್ಯ |
| 19 | ರಾಮನಗರ | ಶಾಂತಲಾ ಚಾರಿಟಬಲ್ ಟ್ರಸ್ಟ್, |
| 20 | ಶಿವಮೊಗ್ಗ | ಜೀವನಕಿರಣ ವೃದ್ಧಾಶ್ರಮ, ಅಗರದ ಹಳ್ಳಿ, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ |
| 21 | ತುಮಕೂರು | ಶ್ರೀಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್, (ರಿ), ಶಿ ತುಮಕೂರು ಜಿಲ್ಲೆ |
| 22 | ಮಡಿಕೇರಿ | ಶ್ರೀ ಶಕ್ತಿ ಅಸೋಸಿಯೇಷನ್ (ರಿ), ಕೊಡಗು |
| 23 | ಯಾದಗಿರಿ | ಅಕ್ಷತಾ ಮಹಿಳಾ ಮಂಡಳಿ, ಯಾದಗಿರಿ |
| 24 | ಚಾಮರಾಜನಗರ | ಜ್ಞಾನಸಿಂಧು ವೃದ್ಧಾಶ್ರಮ, ಚಾಮರಾಜನಗರ |
| 25 | ದಕ್ಷಿಣಕನ್ನಡ | ಅಭಯ ಆಶ್ರಯ, (ರಿ) ಅಸೈಗೋಳಿ, ಕೊಣಾಜಿ, ಮಂಗಳೂರು |
| 26 | ಮೈಸೂರು | ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ, ಮೈಸೂರು-570004 |
| 27 | ಉತ್ತರಕನ್ನಡ | |
| 28 | ರಾಯಚೂರು | ಜಿಲ್ಲಾ ಕಛೇರಿಯಿಂದ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |
| 29 | ಉಡುಪಿ | ಪರಿಶೀಲನಾ ಹಂತದಲ್ಲಿ ಇರುತ್ತದೆ. |
| 30 | ದಾವಣಗೆರೆ | |
| 31 | ಬೆಂಗಳೂರು (ಗ್ರಾ) | ನಿರ್ದೇಶನಾಲಯದ ಪರಿಶೀಲನಾ ಹಂತದಲ್ಲಿ ಇರುತ್ತದೆ |

ಕರ್ನಾಟಕ ಸರ್ಕಾರ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ
ನಿರ್ದೇಶಕರ ಕಛೇರಿ, ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು-560001
ದೂ.ಸಂ.080-22860907 ಫ್ಯಾಕ್ಸ್:080-22868347 ಇ-ಮೇಲ್ ವಿಳಾಸ:dir-dwdsc-ka@nic.in /dirdwdscka@gmail.com

ಸಂಖ್ಯೆ:ವಿಹಿನಿ/ವಿಪಪ್ರ/918/15/2022-2023 ದಿನಾಂಕ:20.12.2022

ಸರ್ಕಾರದ ಕಾರ್ಯದರ್ಶಿಗಳು,
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆಸಂಖ್ಯೆ:918ಕ್ಕೆ ಉತ್ತರ ನೀಡುವ ಕುರಿತು.

ಉಲ್ಲೇಖ: ಸರ್ಕಾರದ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರ ಪತ್ರ ಸಂಖ್ಯೆ: ಎಲ್.ಸಿ.ಕ್ಯೂ/918/148ನೇ/2022 ದಿನಾಂಕ:06.12.2022

* * * *

ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆಸಂಖ್ಯೆ:918ಕ್ಕೆ ಉತ್ತರವನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ

**ನಿರ್ದೇಶಕರು**
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ,
ಬೆಂಗಳೂರು.